ಸತ್ಯಂ ಶಿವಂ ಸುಂದರಂ

# ಶ್ರೀ ಕೃಷ್ಣನ ಪ್ರೀತಿ ಸಂದೇಶ

ನನ್ನ ಪ್ರೀತಿ ಪಾತ್ರರೇ,

ನಿಮ್ಮಲ್ಲಿ ನನಗೆ ಅಪಾರ ಪ್ರೀತಿಯಿದೆ, ವಾತ್ಸಲ್ಯವಿದೆ. ಆದರೆ ನನ್ನ ಕಾರ್ಯ ನಿಮ್ಮ ನಡತೆಯಿಂಥ ಸ್ವಚ್ಛಂದತೆಯಿಂದ ಅಡಚಣೆಗೀಡಾಗುತ್ತಿದೆ. ನನ್ನ ಕಾರ್ಯಮಗ್ನತೆಗೆ ಭಂಗಬರುತ್ತಿದೆ. ಅದನ್ನು ತಡೆಯಿರೆಂದು ಇದೋ ನಿಮ್ಮನ್ನು ಎಚ್ಚರಿಸುತ್ತಿದ್ದೇನೆ. ಪೂರ್ವಸೂಚನೆ ನೀಡುತ್ತಿದ್ದೇನೆ. ಏಕೆಂದರೆ ನೀವು ನನ್ನ ಮಕ್ಕಳು. ನನ್ನ ಮಕ್ಕಳನ್ನು ನಾನು ಅಪಾರವಾಗಿ ಪ್ರೀತಿಸುತ್ತೇನೆ. ಈ ನನ್ನ ಸೃಷ್ಟಿಯು ಎಷ್ಟು ಸುಂದರಾಗಿದೆ ಎಂದರೆ, ಈ ಸೌಂದರ್ಯವನ್ನು ಸವಿಯುವ ಆಸೆಯಿದ್ದರೆ ಸವಿದು ಸಂತೋಷಿಸಿ, ಆದರೆ ಅದನ್ನು ವಿಕೃತಗೊಳಿಸಲು ಹೋಗಬೇಡಿ. ಈ ಸೌಂದರ್ಯ ನನಗೂ ತುಂಬ ಪ್ರಿಯವಾಗಿದೆ.

ಒಬ್ಬರನ್ನೊಬ್ಬರು ಪ್ರೀತಿ ಸೌಹಾರ್ದಗಳಿಂದ ಕಾಣಿರಿ. ಎಲ್ಲದಕ್ಕೂ ನನ್ನನ್ನೇ ಕಾಡಬೇಕಾದ್ದಿಲ್ಲ. ನಿಮ್ಮ ಸಮಸ್ಯೆಗಳನ್ನು ನೀವೇ ಬಗೆಹರಿಸಿಕೊಳ್ಳಿ.

ನನಗೆ ಪ್ರಿಯವಾದ ಅಂಶಗಳಲ್ಲಿ ಪ್ರಾರ್ಥನೆಯೂ ಒಂದು ಎಂಬುದೇನೋ ನಿಜ. ಆದರೆ ಅದರಿಂದ ನನ್ನನ್ನು ಅತಿಯಾಗಿ ಕಾಡಬೇಡಿ.

ಈ ಜಗತ್ತಿನಲ್ಲಿ ಯಾರೂ ನನ್ನನ್ನು ಎಲ್ಲೂ ಪ್ರತಿಷ್ಠಾಪಿಸಬೇಕಾಗಿಲ್ಲ. ಏಕೆಂದರೆ ಈಗಾಗಲೇ ನಾನು ನಿಮ್ಮ ಹೃದಯಾಂತರಾಳದಲ್ಲಿ ನೆಲೆಗೊಂಡಿದ್ದೇನೆ. ನೀವು ನಿಮ್ಮ ಹೃದಯದ ಬಾಗಿಲನ್ನು ಮುಚ್ಚಿದ್ದೀರಿ ಅಷ್ಟೆ. ಅದನ್ನು ತೆರೆ ಮಾಡಿ ನನ್ನನ್ನು ಮುಕ್ತಗೊಳಿಸಿ. ಬಹುಕಾಲ ಹಾಗೆ ನನ್ನನ್ನು ಬಂಧಿಸಲಾರಿರಿ. ತೆರವು ವಿಶಾಲವಾದಷ್ಟೂ ನಾನು ಸಂತುಷ್ಟನಾಗುತ್ತೇನೆ. ನಿಮ್ಮ ಹೃದಯದಲ್ಲಿರುವ ಪರಿಶುದ್ಧ ಪ್ರೀತಿಯೇ ನಾನು. ನಾನು ನಿಮ್ಮನ್ನು ಪ್ರೀತಿಸಲು ಬಿಡಿ. ನಾನು ನಿಮ್ಮನ್ನು ಅಪಾರವಾಗಿ ಪ್ರೀತಿಸುತ್ತೇನೆ.

..2..

ನನಗೆ ಮಾತಿಗಿಂತ ಕೃತಿಯಲ್ಲಿ ಹೆಚ್ಚು ಭರವಸೆ ಮಾತಿಗಿಂತ ಕೃತಿ ಹೆಚ್ಚು ಅರ್ಥಪೂರ್ಣ. ಬರೀ ಮಾತಿನಿಂದ ನನ್ನನ್ನು ಕೊಂಡಾಡಬೇಡಿ. ನನ್ನನ್ನು ಮೆಚ್ಚಿಸಬೇಕೆಂಬ ಮನಸ್ಸಿದ್ದರೆ ಏನಾದರೂ ಸತ್ಕಾರ್ಯ ಮಾಡಿ. ನನ್ನ ಕಾರ್ಯವನ್ನು ಮಾತ್ರ ಕೆಡಿಸಬೇಡಿ. ನನ್ನ ವಿನಂತಿ ಏನೆಂದರೆ, ನೀವು ಕತೆ ಕೇಳುತ್ತಾ ಕಾಲ ಕಳೆಯುವುದಕ್ಕಿಂತ ನೀವೇ ಕಥಾವಸ್ತುವಾಗುವಂತೆ ಚರಿತ್ರಾರ್ಹವಾದದ್ದೇನನ್ನಾದರೂ ಏಕೆ ಸಾಧಿಸಬಾರದು?

ಒಣ ಮಾತುಗಾರಿಕೆಯಲ್ಲಿ ನನಗೆ ವಿಶ್ವಾಸವಿಲ್ಲ. ನಿಮ್ಮ ಕೈಲಾಗುವಂತಿದ್ದರೆ ನನ್ನ ಮಹತ್‌ಕಾರ್ಯದಲ್ಲಿ ಸಹಾಯವಾಗುವಂತೆ ಸೃಷ್ಟಾತ್ಮಕವಾಗಿ ಏನಾದರೂ ಸಾಧಿಸಿ ತೋರಿಸಿ. (ಹಾಗಿಲ್ಲದಿದ್ದಲ್ಲಿ) ಕಡೇ ಪಕ್ಷ ನನ್ನ ಕಾರ್ಯಕ್ಕೆ ಧಕ್ಕೆ ಬರದಂತೆ ನಡೆದುಕೊಂಡರೂ ಸಾಕು, ನಾನು ನಿಮ್ಮನ್ನು ಪ್ರೀತಿಸುತ್ತೇನೆ ಎಂಬುದರಲ್ಲಿ ಸಂಶಯಬೇಡ.

ಹೆಸರು ಮಾಡಲು, ಗೆಲವು ಸಾಧಿಸಲು ತುಂಬ ಹೆಣಗಾಟ ಬೇಡ, ಕಾತುರತೆ ಬೇಡ, ಕಷ್ಟ ಬೇಡ. ಬದಲಾಗಿ ನನ್ನನ್ನು ಪ್ರೀತಿಸಿ. ಹಾಗೂ ಇತರರನ್ನು ಪ್ರೀತಿಸಿ. ಇತರರು ಅಂದರೆ ಯಾರು? ಕ್ರಮವಾಗಿ, ಮೊದಲು ತಂದೆ, ತಾಯಿ, ಬಳಿಕ ಸೋದರ ಸೋದರಿಯರು, ನಂತರ ಪತಿ/ಪತ್ನಿ ಮಕ್ಕಳು, ತದನಂತರ ಬಂಧು ಬಾಂಧವರು ಮತ್ತು ಮಿತ್ರರು, ಬಳಿಕ ಉಳಿದವರು. ಮಕ್ಕಳೆ, ಗೆಲವು ನಿಮ್ಮದೆಂದು ಆಣೆ ಮಾಡಿ ಹೇಳುತ್ತೇನೆ.

ಇದನ್ನು ನಾನೇಕೆ ನಿಮಗೆ ಹೇಳುತ್ತಿದ್ದೇನೆಂದರೆ ನಿಮ್ಮ ಮೇಲೆ ಅಪಾರವಾದ ಪ್ರೀತಿ ಇರುವುದರಿಂದ, ನನಗೆ ನಿಮ್ಮ ಪ್ರೀತಿ ಬೇಕಾಗಿದೆ ಎಂದಲ್ಲ. ನಿರಪೇಕ್ಷವಾಗಿ ನಾನು ನಿಮ್ಮನ್ನು ಪ್ರೀತಿಸುತ್ತೇನೆ. ಎಂದೆಂದಿಗೂ ಪ್ರೀತಿಸುತ್ತಲೇ ಇರುತ್ತೇನೆ. ನಿಮ್ಮ ಅರಿವಿಗೇ

ಬಾರದಂತೆ, ನಿಮ್ಮ ದುರ್ನಡತೆಯ ಪರಿವೆಯೇ ಇಲ್ಲದಂತೆ, ನಿಮ್ಮ ಅಂಕೆ ಶಂಕೆಯಿಲ್ಲದ ಆಟಗಳನ್ನು ಲೆಕ್ಕವಿರಿಸದಂತೆ ನಾನು ನಿಮ್ಮನ್ನು ಪ್ರೀತಿಸುತ್ತೇನೆ. ಕಾರಣ ಕೇಳಬೇಡಿ. ಅದು ನಿಮ್ಮ ಬೇಡ, ಆದರೂ ನಿಮ್ಮನ್ನು ಪ್ರೀತಿಸುತ್ತೇನೆ. ನನ್ನನ್ನು ಯಾರು ಶ್ರದ್ಧೆಯಿಂದ, ಪ್ರಾಮಾಣಿಕವಾಗಿ ನೆನೆಯುತ್ತಾರೋ ಅವರ ಮನದಲ್ಲಿ ತತ್‌ಕ್ಷಣ ಪ್ರಕಟಗೊಳ್ಳುತ್ತೇನೆ. ನನ್ನ ಸಂದೇಶದಲ್ಲಿ ಪೂರ್ಣ ವಿಶ್ವಾಸವಿಡಿ.

ಜೀವನದ ಸಕಲಸೌಲಭ್ಯಗಳೂ ನಿಮ್ಮದಾಗಲೆಂದು ಹಾರೈಸುವ ನಿಮ್ಮ ಪ್ರೀತಿಯ.

**ಶ್ರೀಕೃಷ್ಣ**

***SHRI KRISHNA'S***
***'MESSAGE OF LOVE/ PREM SANDESH'***
***brought to you by Vijaya Krishna***


**VIJAYA MISSION**

***#52 / 42, Central Street, 8-9th Cross,***
***Railway Parallel Road, Kumarapark West,***
***Bengalore-560020.***

*Tel - 080-23449165 / +91 988 000 1828*
*E-mail: krsna1828@gmail.com*
*www.sssvijayamission.com*